ಮುಂದುವರಿಯುತ್ತಲೇ ಇರಲಿಲ್ಲ. ನನ್ನ ಬುದ್ಧಿಗಾವ ಮಂಕು ಕವಿದಿತ್ತೋ ಎಂದುಕೊಂಡು ಈ ಕೂಡಲೇ ಬ್ಲಾಕ್ ಮಾಡಿ ಬಿಸಾಕೋಣ ಎಂದು ಮೊಬೈಲ್ ಮೇಲೆ ಕಣ್ಣಾಡಿಸುವಷ್ಟರಲ್ಲಿ ಮತ್ತೊಂದು ಮೆಸೇಜು ಹಾರಿ ಬಂದಿತ್ತು.

"ನನ್ನ ಬಗ್ಗೆ ನಿಮ್ಮ ಅಭಿಪ್ರಾಯ ಮತ್ತೆ ಬದಲಾಗಿ ಹೋಯ್ತು ಅಂದುಕೊಂಡಿದೀನಿ. ನನ್ನ ಪ್ರಕಾರ ನೀವೀಗಾಗಲೇ ಬ್ಲಾಕ್ ಮಾಡಲು ನಿರ್ಧಾರ ಮಾಡಿರ್ತೀರ. ಆದ್ರೆ ಪ್ರಣತೀ, ನಿಜ ಹೇಳಿ ಎಂದೂ ಕಾಣದ, ಒಡನಾಡದ ಒಬ್ಬ ಮನುಷ್ಯನ ಬಗ್ಗೆ ಅವನ ಕೆಲವೇ ಮೆಸೇಜುಗಳಿಂದ ಅಳೆಯೋದು ತುಂಬಾ ತಪ್ಪು ಅನಿಸತ್ತೆ. ಎಲ್ಲೋ ಕೂತು ಕಾಣದ ಮುಖಗಳಿಗೆ ಯಾವ ಮೆಸೇಜು ಬೇಕಾದರೂ ಬಹಳ ಸುಲಭವಾಗಿ ಹಾರಿ ಬಿಡಬಹುದಲ್ಲವೆ? ಇದೆಷ್ಟು ಸುಲಭವೋ ತನ್ನ ಇಮೆಜನ್ನ ಗಳಿಸೋದು, ಕಳೆದುಕೊಳ್ಳೋದು ಎರಡೂ ಅಷ್ಟೇ ಸುಲಭ ಅಂತ ನನ್ನ ಅಭಿಪ್ರಾಯ. ಇಲ್ಲಿ ಬಹಳ ಜನ ಮತ್ತ್ಯಾರದ್ದೋ ಪ್ರೊಫೈಲ್ ಫೋಟೊ ಹಾಕಿ ಮತ್ತ್ಯಾರದ್ದೋ ಹೆಸರಿನಲ್ಲಿ ಪ್ರೊಫೈಲ್ ತೆಗೆದವರಿರ್ತಾರೆ. ಆದರೆ ನಾನು ಬಹಳ ಸಾಚಾ ಮನುಷ್ಯ ಕಣ್ರೀ. ಇದನ್ನು ಮಾತ್ರ ನೀವು ಖಂಡಿತ ನಂಬಬಹುದು. ನಾನು ನಿಮ್ಮ ಸ್ನೇಹವನ್ನ ಅಪೇಕ್ಷಿಸಿದರೆ ತಪ್ಪೇನು? ನನ್ನಿಂದ ನಿಮಗ್ಯಾವ ತೊಂದರೆಯೂ ಇಲ್ಲ. ನಂಬಿದರೆ ಉತ್ತರಿಸಿ. ಇಲ್ಲ, ಈ ಕ್ಷಣ ಬ್ಲಾಕ್ ಮಾಡಿ."

ಪ್ರಣತಿಗೆ ಏನು ಮಾಡಬೇಕೋ ತಿಳಿಯದಾಯಿತು. ಮನೆಯ, ಬದುಕಿನ ಎಲ್ಲಾ ವಿಚಾರಗಳಲ್ಲಿ ಗಟ್ಟಿಯಾಗಿ ನಿರ್ಧಾರ ತೆಗೆದುಕೊಳ್ಳುವ ತನಗೆ ಒಬ್ಬ ಅಪರಿಚಿತ ಗಂಡು ಅದೂ ತನಗಿಂತ ಕಿರಿಯ ಹೀಗೆ ಸವಾಲೆಸೆದಾಗ ನಿರ್ಧರಿಸುವುದಕ್ಕೆ ಆಗುತ್ತಿಲ್ಲವೆಂದರೆ ಏನೆನ್ನಬೇಕು. ಈ ಬಗ್ಗೆ ಸೂರಜನಿಗೆ ಹೇಳಿದರೆ? ಅವನೇನೆಂದಾನು? ಯಾವನೋ ಅಪರಿಚಿತನೊಂದಿಗೆ ಸ್ನೇಹವೇಕೆ ಎನ್ನಬಹುದೆ ಅಥವಾ ಇದಕ್ಕೆಲ್ಲಾ ನನ್ನನ್ನು ಯಾಕೆ ಕೇಳುವುದು? ನೀನು ಯಾರೊಂದಿಗೆ ಸ್ನೇಹ ಬೆಳೆಸಿದರೂ ನಾನೇನೂ ಅನ್ನುವುದಿಲ್ಲ. ನೀನೇನೆಂದು ನನಗೆ ಗೊತ್ತಿದೆ ಎನ್ನಬಹುದೆ? ಇದೇ ಸ್ಥಿತಿಯಲ್ಲಿ ಸೂರಜ್ ನಿಂತು ತನ್ನ ಅಭಿಪ್ರಾಯ ಕೇಳಿದರೆ, ತಾನೇನು ಹೇಳಿಯೇನು ಎಂದು ಯೋಚಿಸುತ್ತಲೆ ಕೂತವಳಿಗೆ ಗಡಿಯಾರ ಹನ್ನೆರಡು ತೋರಿಸುತ್ತಿತ್ತು. ನಿದ್ದೆಯೆನ್ನುವುದು ಇಂದೇಕೋ ಒದ್ದುಕೊಂಡು ಬರುತ್ತಿದ್ದರೂ ಈ ವಿಕ್ರಮನೆಂಬುವನ ಪ್ರಶ್ನೆ ಬೇತಾಳದಂತೆ ತನ್ನ ಹೆಗಲೇರಿ ಕುಳಿತಿದೆಯೆನಿಸಿತು. ಇವನ ಮೆಸೇಜುಗಳಿಗೆ ಉತ್ತರಿಸುವುದೋ, ಇಲ್ಲ ಬ್ಲಾಕ್ ಮಾಡಿ ಮರೆತುಬಿಡಲೋ ಎಂದು ನಿರ್ಧರಿಸಲಾಗದೆ ಸುಮ್ಮನೆ ಮೊಬೈಲನ್ನೇ ನೋಡುತ್ತಾ ಕುಳಿತಳು.

"ಹಾಯ್, ಇನ್ನೂ ಮಲಗಿಲ್ಲವೆ?'' ಎನ್ನುವ ಮೆಸೇಜೊಂದು ಮತ್ತಾರದೋ ಹೆಸರಿನಲ್ಲಿ ತಟ್ಟನೆ ಮೊಬೈಲ್‌ಸ್ಕ್ರೀನ್ ಮೇಲೆ ಮೂಡಿತು.

**ಶುಭಾ ಎ.ಆರ್.**

ಲೇಖಕಿ ಪ್ರೌಢಶಾಲೆಯ ವಿಜ್ಞಾನ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದಾರೆ. ಕತೆ, ಕವನಗಳನ್ನು ಪ್ರಕಟಿಸುತ್ತ ಬಂದಿರುವ ಅವರು ನಾಟಕಗಳನ್ನು ಕೂಡ ಬರೆದಿದ್ದಾರೆ. ಮಕ್ಕಳಿಗಾಗಿ ಮೂರು ವೈಜ್ಞಾನಿಕ ನಾಟಕಗಳ 'ಧರೆಯನುಳಿಸುವ ಬನ್ನಿರಿ' ಪುಸ್ತಕ ಪ್ರಕಟವಾಗಿದೆ.